# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 195(133)
ಉತ್ತರಿಸಬೇಕಾದ ದಿನಾಂಕ : 14.02.2024
ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದಿನ ಸರ್ಕಾರ ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬದ ದುಡಿಯುವ ವ್ಯಕ್ತಿಯ ವಾರಸುದಾರರಿಗೆ ರೂ. 1.00 ಲಕ್ಷ ಪರಿಹಾರ ನೀಡುವ ಘೋಷಣೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಕಂಇ/294/ಟಿ.ಎನ್.ಆರ್/2021, ಬೆಂಗಳೂರು, ದಿನಾಂಕ:08/07/2021 ರನ್ವಯ ಮತ್ತು ಸರ್ಕಾರದ ಆದೇಶ ಸಂಖ್ಯೆ: ಕಂಇ 400 ಟಿಎನ್‌ಆರ್ 2021 ದಿನಾಂಕ: 28.09.2021 ರ ಮಾರ್ಗಸೂಚಿ ಹಾಗೂ ತಿದ್ದುಪಡಿ ಆದೇಶ ದಿನಾಂಕ:01.10.2021 ರನ್ವಯ ಬಿ.ಪಿಎಲ್ ಕುಟುಂಬದವರಿಗೆ ಘೋಷಿಸಿರುವ ರೂ.1.00 ಲಕ್ಷ ಪರಿಹಾರವನ್ನು ಪಡೆಯಲು ಕೋವಿಡ ಮೃತ ಪ್ರಕರಣವು ಆರೋಗ್ಯ ಇಲಾಖೆಯ ದತ್ತಾಂಶದಲ್ಲಿರಬೇಕು ಮತ್ತು ಮೃತ ವ್ಯಕ್ತಿಯು ಹಾಗೂ ಅರ್ಜಿದಾರರು ಒಂದೇ ಬಿಪಿಎಲ್ ಕುಟುಂಬಕ್ಕೆ ಸೇರಿದವರಾಗಿರಬೇಕು. |
| ಆ) | ಬಂದಿದಲ್ಲಿ ಕೋವಿಡ್‌ನಿಂದ ಮೃತಪಟ್ಟ ಎಷ್ಟು ಮಂದಿ ಬಿಪಿಎಲ್ ಕುಟುಂಬ ವರ್ಗದವರಿಗೆ ರೂ 1.00 ಲಕ್ಷಗಳ ಪರಿಹಾರವನ್ನು ವಿತರಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರವನ್ನು ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 400 ಟಿಎನ್‌ಆರ್ 2021, ದಿ:28.09.2021 ಹಾಗೂ ಮಾರ್ಗಸೂಚಿಯನ್ವಯ ಕೋವಿಡ ಪರಿಹಾರಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ಅರ್ಹತೆ ಹಾಗೂ ಕಾನೂನು ಬದ್ಧ ವಾರಸುದಾರನನ್ನು ಗುರುತಿಸುವುದು ಮತ್ತು ರಾಜ್ಯ ಸರ್ಕಾರದ ಹೆಚ್ಚುವರಿ ಪರಿಹಾರ ರೂ.1.00 ಲಕ್ಷ ಪಾವತಿಯ ಕುರಿತಾದ ಸಂಪೂರ್ಣ ನಿರ್ಣಯ ಹಾಗೂ ವಿತರಣೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು/ ಬಿಬಿಎಂಪಿ ವ್ಯಾಪ್ತಿಯ ಜಂಟಿ ಆಯುಕ್ತರು, ಬಿಬಿಎಂಪಿ ಇವರದ್ದಾಗಿರುತ್ತದೆ. ಪರಿಹಾರ ವಿತರಣೆಯ ಅನುದಾನವನ್ನು ಎಲ್ಲಾ ಜಿಲ್ಲಾಧಿಕಾರಿಗಳು/ಬಿಬಿಎಂಪಿ ಜಂಟಿ ಆಯುಕ್ತರುಗಳಿಗೆ ನಿರ್ದೇಶನಾಲಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.<br><br>ಸರ್ಕಾರವು ಘೋಷಿಸಿರುವ ರೂ.1.00ಲಕ್ಷ ಪರಿಹಾರ ವಿತರಣೆ ಕುರಿತಂತೆ ಜಿಲ್ಲೆಗಳಿಂದ ಸ್ವೀಕೃತವಾಗಿರುವ ಹಣಬಳಕೆ ಪ್ರಮಾಣ ಪತ್ರದನ್ವಯ ರಾಜ್ಯದಲ್ಲಿ ಒಟ್ಟು 14218 ಅರ್ಹ ಪ್ರಕರಣಗಳಿಗೆ ತಲಾ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ವಿತರಿಸಲಾಗಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಇ) | ಮೃತರ ಕುಟುಂಬ ವರ್ಗಕ್ಕೆ ಪರಿಹಾರ ಮೊತ್ತ ತಲುಪಿರುವ ಬಗ್ಗೆ ಸರ್ವೆ ಕೈಗೊಳ್ಳಲಾಗಿದೆಯೇ; ಕೈಗೊಳ್ಳದಿದ್ದಲ್ಲಿ ಸರ್ವೆ ಕೈಗೊಂಡು ಪರಿಹಾರ ಮೊತ್ತ ನೀಡಲಾಗುವುದೇ? | ಆರೋಗ್ಯ ಇಲಾಖೆಯಿಂದ ಕೋವಿಡ ಮೃತ ಪ್ರಕರಣಗಳ ಮಾಹಿತಿಯನ್ನು ಪಡೆದು ಜಿಲ್ಲಾ/ತಾಲ್ಲೂಕುಗಳಿಗೆ ನೀಡಿದ್ದು, ಕಂದಾಯ ಇಲಾಖೆಯ ಸಿಬ್ಬಂದಿ ಕೋವಿಡ ಮೃತ ಕುಟುಂಬಗಳ ಮನೆಗಳಿಗೆ ಸ್ವಯಂ ಪ್ರೇರಿತವಾಗಿ ಭೇಟಿ ನೀಡಿ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ತಂತ್ರಾಂಶದಲ್ಲಿ ಅರ್ಜಿ ಸೃಜಿಸಿರುತ್ತಾರೆ. ಅರ್ಹ ಪ್ರಕರಣಗಳಲ್ಲಿ ರೂ.1.00 ಲಕ್ಷ ಪರಿಹಾರದ ಚೆಕ ವಿತರಿಸಲಾಗಿದ್ದು, ಮಾಹಿತಿಯನ್ನೊಳಗೊಂಡ ವಹಿಯನ್ನು ಜಿಲ್ಲಾ/ತಾಲ್ಲೂಕುಗಳಲ್ಲಿ ನಿರ್ವಹಿಸಲಾಗಿದೆ |

**ಕಡತ ಸಂಖ್ಯೆ:ಆರ್‌ಡಿ 28 ಕೆಎಟಿ ಎಸ್‌ಎಸ್‌ಪಿ 2024**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 195 (133)ಕ್ಕೆ ಅನುಬಂಧ

| SL.NO | District | Rs.1.00 lakh compensation paid to BPL families |
|---|---|---|
| 1 | Bagalkot | 151 |
| 2 | Ballari | 778 |
| 3 | Bangalore Rural | 533 |
| 4 | Belagavi | 421 |
| 5 | Bengaluru | 567 |
| 6 | Bengaluru BBMP | 2908 |
| 7 | Bidar | 185 |
| 8 | Chamarajanagar | 326 |
| 9 | Chikballapur | 256 |
| 10 | Chikkamagaluru | 273 |
| 11 | Chitradurga | 166 |
| 12 | Dakshina Kannada | 523 |
| 13 | Davanagere | 352 |
| 14 | Dharwad | 467 |
| 15 | Gadag | 151 |
| 16 | Hassan | 749 |
| 17 | Haveri | 479 |
| 18 | Kalaburagi | 313 |
| 19 | Kodagu | 172 |
| 20 | Kolar | 349 |
| 21 | Koppal | 260 |
| 22 | Mandya | 440 |
| 23 | Mysuru | 890 |
| 24 | Raichur | 169 |
| 25 | Ramanagara | 241 |
| 26 | Shivamogga | 415 |
| 27 | Tumakuru | 785 |
| 28 | Udupi | 225 |
| 29 | Uttara Kannada | 447 |
| 30 | Vijayanagar | 304 |
| 31 | Vijayapura | 192 |
| 32 | Yadgir | 134 |
| | **Total** | **14218** |